ದಟ್ಟ ಕಾನನದ ಮಳೆಯ ರಭಸಕ್ಕೆ ಬೆಚ್ಚಿಬಿದ್ದಿದ್ದೆ.

ರಾತ್ರಿಯಿಡೀ ಅದೇ ಸದ್ದು. ಕಣ್ಣರೆಪ್ಪೆಯ ಮೇಲೆ ಕುಳಿತು ಕನಸು ನಿದ್ರಿಸಿದಂತೆ. ಬೇಕಂತಲೇ ಕಿಟಕಿಯನ್ನು ತೆರೆದು ಮಲಗಿದವಗೆ ನಿದ್ದೆ ಬಂತೋ ಬರಲಿಲ್ಲವೋ ಆ ಸದ್ದು ಮಾಡುತ್ತಿದ್ದ ಗದ್ದಲದೊಳಗೆ ಒಂದೂ ತಿಳಿಯಲಿಲ್ಲ. ಸೂರ್ಯನಿರದ, ಬಿಸಿಲು ತೋರದ ಮುಂಜಾನೆಯ ಬೆಳಕು ಸುತ್ತಲಿರುವ ಕಾಡು ತೋರಿಸುತ್ತಿತ್ತೇ ಹೊರತು ಕಣಿವೆಯ ಆಳವಾಗಲಿ, ಅಗಲವಾಗಲಿ, ಜಲಧಾರೆಯಾಗಲಿ ಕಾಣಿಸುತ್ತಿರಲಿಲ್ಲ. ಇಡೀ ಕಾಡಿನ ಮರ ಗಿಡಗಳ ನಡುವೆ ಧೂಪ ಹಾಕಿದಂತೆ, ಮೋಡ ತನ್ನ ತೆಳ್ಳನೆಯ ಬಿಳಿ ಬಟ್ಟೆಯನ್ನು ಬೀಸುತ್ತಾ ಸಾಗಿದಂತೆ, ಮಳೆಯ ಹನಿಗಳು ಗಿಡದ ಕೊಂಬೆ ರೆಂಬೆಗಳಿಗೆ ಹಬ್ಬಿ ನಿಂತ ಬಳ್ಳಿಗಳಿಗೆ ಮುತ್ತು ಪೋಣಿಸಿದಂತೆ, ಬಿಸಿಲ ಕೋಲಿಗಾಗಿ ಕಾದು ಕುಳಿತಂತೆ ಕಾಣುತ್ತಿತ್ತು.

ಮಳೆ ಸುರಿದೂ ಸುರಿದೂ ಗಿಡ ಮರದ ಬೊಡ್ಡೆಗಳಷ್ಟೇ ಅಲ್ಲದೆ – ಕಲ್ಲು ಬಂಡೆಗಳು, ಸಿಮೆಂಟು ಪಾವಟಿಗೆಗಳು ಪಾಚಿಯನ್ನು ಹೊದ್ದುಕೊಂಡು ಹಸಿರು ಬಣ್ಣಕ್ಕೇನೆ ಹೊಸ ಉಸಿರು ನೀಡಿ ಮಿಡಿಯುವಂತಿತ್ತು. ಬೆಳಕು ವಿಸ್ತರಿಸಿದಂತೆಲ್ಲಾ ಆಗೊಮ್ಮೆ ಈಗೊಮ್ಮೆ ಗಾಳಿ ಬೀಸಿ ಮೋಡ ಸರಿಸಿದಾಗ ಕಣ್ಣಾಮುಚ್ಚಾಲೆಯಾಡುವ ಮಗುವಿನಂತೆ ಮಾಗೋಡು ಮಾಯಾಂಗನೆ ಈಟೀಟೇ ಕಂಡು ಮಾಯವಾಗುತ್ತಿದ್ದಳು. ‘ಅಗೋ ಅಲ್ಲಿ, ಅಲ್ಲಿ’ ಎನ್ನುವುದರೊಳಗೆ ದಟ್ಟ ಮೋಡದ ಹೊಗೆಯ ಸೆರಗಿನ ಮರೆಯೊಳಗೆ ಅವಿತುಕೊಂಡುಬಿಡುತ್ತಿದ್ದಳು. ತಮಟೆ ಹರಿದುಹೋಗುವ ಹಾಗೆ ಬಾರಿಸುವ ಡೊಳ್ಳೋ ತಮಟೆಯೋ ಮದ್ದಲೆಯೋ ನಗಾರಿಯೋ ಬಿಡಿಸಿ ಹೇಳುವುದು ಕಷ್ಟ. ಒಟ್ಟಾರೆ ಅದರ ‘ತಂನಂ ತದ್ಧಿನತೋಂ’ ತಾಳವನ್ನಷ್ಟೆ ಕೇಳುತ್ತಾ ನಿಂತಿದ್ದ ಕಿವಿಗಳಿಗೆ ದಣಿವೆಂಬುದೇ ಇಲ್ಲವಾಗಿತ್ತು. ಆದರೆ ಇಷ್ಟಗಲ ಕಣ್ಣು ಕಿಸಿದು ತದೇಕಚಿತ್ತವಾಗಿದ್ದ ಕಣ್ಣೆಂಬೋ ಕಣ್ಣಿಗೆ ಸಾಕಪ್ಪಾ ಸಾಕು ಎನ್ನುತ್ತಿರಬೇಕಾದರೆ, ‘ಅಯ್ಯೋ ಪಾಪ, ಹೋಗಲಿ ಬಿಡು, ಚೂರಾದರೂ ದರ್ಶನ ಕೊಟ್ಟು ಖುಷಿಪಡಿಸೋಣ’ ಎಂಬಂತೆ ಕಣಿವೆಯ ಮಾಸಲು ಪರದೆ ನಿಧನಿಧಾನಕ್ಕೆ ಸರಿದು ಮಾಗೋಡು ಚೆಲುವೆಯ ರುದ್ರ ರಮಣೀಯ ಚೆಲುವನ್ನು ಎದುರಿಗೆ ತಂದು ನಿಲ್ಲಿಸಿತ್ತು.

‘ಅಬ್ಬಾ! ಏನಾ ಚೆಲುವು. ತುಂಬಿ ತುಳುಕುವ ತುಂಬು ಯೌವನದ ಚೆಲುವೆ’. ಅವಳ ನರ್ತನ, ವನಪು, ವಯ್ಯಾರ ಪುರಾಣ ಪುಣ್ಯಕಥೆಗಳ ರಂಭೆ ಊರ್ವಶಿಯರ ಸಿನಿಮಾದ ರೂಪಸಿಯರಂತೆ ಎದುರಿಗೆ ತಂದು ನಿಲ್ಲಿಸಿದಂತಾಗಿತ್ತು! ‘ರಾಮ್ ತೇರಿ ಗಂಗಾ ಮೈಲಿ’ಯ ಮಂದಾಕಿನಯನ್ನೊಮ್ಮೆ ನೋಡಿದಂತಾಯ್ತು! ಮೂರು ತಿರುವುಗಳಲ್ಲಿ ಹರಿದು, ಮುರಿದು, ಇರಿದು ‘ಧಡ್ ಧಡಾಲ್’ ಎಂದು ಧುಮುಕಿ, ‘ನನಗೇನೂ ಗೊತ್ತಿಲ್ಲಪ್ಪ’ ಎಂಬ ಮಳ್ಳಿಯಂತೆ ಕಣಿವೆಯೊಳಗೆ ಕಾಣೆಯಾಗುವ ಕಳ್ಳಿ ಇವಳು ಎಂದೆನಿಸಿತು. ‘ಫೋಟೊ ತೆಗೆ, ವಿಡಿಯೊ ಮಾಡು, ನೀ ಇಲ್ಲಿ ಬಾ, ಅಲ್ಲಿಂದ ತೆಗಿ’



